ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಟಿ. ನರೇಂದ್ರ ಪ್ರಸಾದ್

ಮೆ:ಸುನ್ವಿಕ್ ಸ್ಟೀಲ್ಸ್ ಪ್ರೈವೇಟ್ ಅಮಿಟೆಡ್ -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು

ರಿಟ್ ಅರ್ಜಿಸಂಖ್ಯೆ: 14671/2007 (ಜಿಎಮ್-ಎಮ್ಎಮ್ಎಸ್), ದಿನಾಂಕ 4 ನೇ ನವೆಂಬರ್, 201

ಆದೇಶ

ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ:

ಭಾರತ ಸಂವಿಧಾನದ 226 ನೇ ಅನುಚ್ಛೇದದ ಮೆರೆಗೆ ಸಲ್ಲಿಸಿದ ಈ ರಿಟ್ ಅರ್ಜಿಯ ಮೂಲಕ, ರಿಟ್ ಅರ್ಜಿಸಂಖ್ಯೆ: 3557/2003 ರಲ್ಲಿ ಈ ನ್ಯಾಯಾಲಯದ ಮಾನ್ಯ ಹಿರಿಯ ನ್ಯಾಯಾಧೀಶರು ಹೊರಡಿಸಿದದಿನಾಂಕ: 23 ನೇ ಜುಲೈ, 2004 ರ ಆದೇಶವನ್ನು ತಳ್ಳಿ ಹಾಕುವಂತೆ ಅರ್ಜಿದಾರರು ಕೋರಿದ್ದಾರೆ.ಎರಡನೇ ಮನವಿಯು 23 ನೇ/26 ನೇ ಜುಲೈ, 2007 ರಂದು ರಾಜ್ಯ ಸರ್ಕಾರವು ಹೊರಡಿಸಿದ ಪತ್ರವ್ಯವಹಾರವನ್ನು ರದ್ದುಗೊಳಿಸುವ ಕುರಿತಾಗಿದ್ದು, ಮೂರನೇ ಮನವಿಯು ಗಣಿಗಾರಿಕೆ ಗುತ್ತಿಗೆಯನ್ನು ಮಂಜೂರು ಮಾಡಲು ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಪರಿಗಣಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿ, ರಿಟ್ ಮ್ಯಾಂಡಮಸ್ ನೀಡುವ ಕುರಿತಾಗಿದೆ.

2. ಹೊನ್ನೇಬಾಗಿ ಗ್ರಾಮದ ಸರ್ವೆಸಂಖ್ಯೆ: 130 ರಲ್ಲಿ ಮತ್ತು ಯರೆಕಟ್ಟೆ ಗ್ರಾಮದಲ್ಲಿರುವ ಸರ್ವೆಸಂಖ್ಯೆ: 28 ರಲ್ಲಿ ಇರುವ 90 ಎಕರೆಗಳ ಪ್ರದೇಶದ ಸಂಬಂಧದಲ್ಲಿ ಮೂರನೇ ಪ್ರತಿವಾದಿಗಳ ತಂದೆಯ ಪರವಾಗಿ 13 ನೇ ಡಿಸೆಂಬರ್, 1958 ರಂದು ಗಣಿ ಗುತ್ತಿಗೆಯನ್ನು (ಸಂಖ್ಯೆ: 468) ಮಂಜೂರು ಮಾಡಲಾಗಿತ್ತು.ಗುತ್ತಿಗೆಯು 20 ವರ್ಷಗಳ ಅವಧಿಯದಾಗಿತ್ತು.ಈ ಗಣಿ ಗುತ್ತಿಗೆಯು ಸುಣ್ಣದ ಕಲ್ಲು, ಡಾಲಮೈಟ್, ಚೀನಾ ಬಿಳಿ ಜೇಡಿ ಮಣ್ಣು (ಚೀನಾ ಕ್ಲೈ) ಮತ್ತು ಕಾವಿ ಬಣ್ಣದ ಜೇಡಿ ಮಣ್ಣು (ಫೈರ್ ಕ್ಲ), ಕಬ್ಬಿಣದ ಅದಿರು ಮತ್ತು ಮ್ಯಾಂಗನೀಸ್ ತೆಗೆಯುವುದಕ್ಕೆ ಸಂಬಂಧಿಸಿತ್ತು.ಇನ್ನೊಂದು ಗಣಿ ಗುತ್ತಿಗೆಯನ್ನು (ಸಂಖ್ಯೆ 1700) 30 ನೇ ಡಿಸೆಂಬರ್, 1978 ರಿಂದ 5 ವರ್ಷಗಳ ಅವಧಿಗಾಗಿ 3 ನೇ ಎದುರುದಾರರ ತಾಯಿಯ ಹೆಸರಿಗೆ 1978 ನೇ ಸಾಲಿನಲ್ಲಿ ಮಂಜೂರು ಮಾಡಲಾಗಿತ್ತು.ಸಂಖ್ಯೆ: ಎಮ್. ಎಲ್. 1700 ನ್ನು ಹೊಂದಿದ್ದ ಸದರಿ ಗಣಿ ಗುತ್ತಿಗೆ ಕೊನೆಗೊಂಡ ನಂತರ, ನವೀಕರಣದ ಅರ್ಜಿಯನ್ನು ಸಲ್ಲಿಸಲಾಗಿದ್ದು, ಅದನ್ನು ಗಣಿಗಾರಿಕೆಯು ತೀವ್ರ ಮಣ್ಣು ಸವೆತಕ್ಕೆಡೆ ಮಾಡಿಕೊಡಬಹುದು ಮತ್ತು ಮಣ್ಣಿನ ಸ್ಥಿತಿಗತಿಯ 0 ಮೇಲೆ ಪರಿಣಾಮ ಬೀರುವುದೆಂಬ ಕಾರಣದ ಮೇಲೆ 24 ನೇ ಜುಲೈ, 1984 ರಂದು ತಿರಸ್ಕರಿಸಲಾಯಿತು.ರಿಟ್ ಅರ್ಜಿಸಂಖ್ಯೆ: 11818/1987 ನ್ನು ಹೊಂದಿದ ರಿಟ್ ಅರ್ಜಿಯನ್ನು 3 ನೇ ಎದುರುದಾರರ ತಾಯಿಯು ಸಲ್ಲಿಸಿದ್ದರು ಮತ್ತು ಅದು ವಜಾಗೊಂಡಿತು.ಸದರಿ ಆದೇಶದ ವಿರುದ್ಧ ವಿಶೇಷ ಅನುಮತಿ ಅರ್ಜಿಯನ್ನು ಸಲ್ಲಿಸಲಾಗಿದ್ದು, ಅದನ್ನು 3 ನೇ ಎದುರುದಾರರು ಹಿಂತೆಗೆದುಕೊಂಡಿದ್ದರು.ಆ ತರುವಾಯ, 3 ನೇ ಎದುರುದಾರರು 29 ನೇ ಜುಲೈ, 1999 ರಂದು ಗಣಿಗಾರಿಕೆ ಗುತ್ತಿಗೆಯ ನವೀಕರಣಕ್ಕಾಗಿ ಮತ್ತೊಂದು ಅರ್ಜಿಯನ್ನು ಸಲ್ಲಿಸಿದ್ದರು.ಅದನ್ನು 3 ನೇ ಜನವರಿ, 2000 ದಂದು ವಜಾಗೊಳಿಸಲಾಗಿತ್ತು.ವಜಾಗೊಳಿಸುವಿಕೆಯ ಸದರಿ ಆದೇಶವನ್ನು 3 ನೇ ಎದುರುದಾರರು ಸಲ್ಲಿಸಿದ ರಿಟ್ ಅರ್ಜಿಸಂಖ್ಯೆ: 22230/2000 ದಲ್ಲಿ ಸ್ಥಿರೀಕರಿಸಲಾಗಿತ್ತು.

3. 8 ನೇ ಅಕ್ಟೋಬರ್, 2002 ರಂದು, ಖನಿಜಗಳ ವಿನಾಯಿತಿ ನಿಯಮಗಳು, 1960 ರ (ಸಂಕ್ಷಿಪ್ತವಾಗಿ " ಸದರಿ ನಿಯಮಗಳು ") 59 ನೇ ನಿಯಮಕ್ಕನುಸಾರವಾಗಿ ಮರು-ಮಂಜೂರಾತಿ ಸಂಬಂಧದಲ್ಲಿ ಗಣಿಗಾರಿಕೆ ನಡೆಸುವ ಸ್ಥಳಗಳನ್ನು ರಾಜ್ಯ ಸರ್ಕಾರವು ಅಧಿಸೂಚಿಸಿತು.ಸದರಿ ಅಧಿಸೂಚನೆಯ ಪ್ರಕಾರ, 3 ನೇ ಎದುರುದಾರರ ತಾಯಿಯು 27 ನೇ ಜನವರಿ, 2003 ರಂದು ಗಣಿಗಾರಿಕೆ ಗುತ್ತಿಗೆಯ ಮರು-ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿದ್ದರು.ಅರ್ಜಿಯನ್ನು ಪರಿಗಣಿಸದೇ ಇದ್ದದ್ದರಿಂದ, ಅವರು ರಿಟ್ ಅರ್ಜಿಸಂಖ್ಯೆ: 3557/2003 ನ್ನು ಸಲ್ಲಿಸಿದ್ದರು.ದಿನಾಂಕ: 23 ನೇ ಜುಲೈ, 2004 ರ ಆದೇಶದ ಮೂಲಕ, ಈ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರು, ಸದರಿ ಅರ್ಜಿಯನ್ನು ಗುತ್ತಿಗೆಯ ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿಯೆಂದು ಪರಿಗಣಿಸಿ, ಕಾನೂನಿನ ಪ್ರಕಾರ ಆ ಕುರಿತು ಆದೇಶವನ್ನು ಹೊರಡಿಸಲು ಮೂರನೇ ಎದುರುದಾರರ ತಾಯಿಯ ಮನವಿಯನ್ನು ಪರಿಗಣಿಸಲು, ಅನುಬಂಧ-ಡಿ ಪ್ರಕಾರ ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗಾಗಿದಿನಾಂಕ: 27 ನೇ ಜನವರಿ, 2003 ರ ಅರ್ಜಿಯನ್ನು ಪರಿಗಣಿಸಲು ಅದರಲ್ಲಿನ ಎದುರುದಾರರಿಗೆ ( ಈ ರಿಟ್ ಅರ್ಜಿಯಲ್ಲಿನ ಮೊದಲನೇ ಮತ್ತು ಎರಡನೇ ಎದುರುದಾರರಿಗೆ) ನಿರ್ದೇಶಿಸಿದರು.ಈ ನ್ಯಾಯಾಲಯವು, ರಿಟ್ ಅರ್ಜಿಸಂಖ್ಯೆ: 11122/2006 ರಲ್ಲಿ, 8 ನೇ ಜೂನ್, 2008 ರ ಆದೇಶದ ಮೂಲಕ, ನಾಲ್ಕು ತಿಂಗಳುಗಳ ಒಳಗಾಗಿದಿನಾಂಕ: 23 ನೇ ಜುಲೈ, 2004 ರ ಆದೇಶವನ್ನು ಅನುಪಾಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿತು.03 ನೇ ಫೆಬ್ರುವರಿ, 2007 ರಂದು, ಅರ್ಜಿದಾರರು 90 ಎಕರೆಗಳ ಅದೇ ಪ್ರದೇಶದ ಸಂಬಂಧದಲ್ಲಿ ಗಣಿಗಾರಿಕೆ ಗುತ್ತಿಗೆಯನ್ನು ಮಂಜೂರು ಮಾಡಲುದಿನಾಂಕ: 8 ನೇ ಅಕ್ಟೋಬರ್, 2002 ರ ಸದರಿ ಅಧಿಸೂಚನೆಯ ಮೇರೆಗೆ ಅರ್ಜಿಯನ್ನು ಸಲ್ಲಿಸಿದರು.ರಿಟ್ ಅರ್ಜಿಸಂಖ್ಯೆ: 9707/2007 ರಲ್ಲಿ ಹೊರಡಿಸಿದದಿನಾಂಕ: 11 ನೇ ಜುಲೈ, 2007 ರ ಆದೇಶದ ಮೂಲಕ ಈ ನ್ಯಾಯಾಲಯವು, ಇತರ ಅರ್ಜಿಗಳೊಂದಿಗೆ ಗಣಿಗಾರಿಕೆ ಗುತ್ತಿಗೆ ಮಂಜೂರಾತಿಗಾಗಿ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಲು ಎದುರುದಾರರಿಗೆ ನಿರ್ದೇಶಿಸಿತು.ಗಣಿ ಹಾಗೂ ಭೂವಿಜ್ಞಾನಗಳ ಆಯುಕ್ತರಿಗೆ ಮತ್ತು ಗಣಿ ಮತ್ತು ಭೂವಿಜ್ಞಾನಗಳ ನಿರ್ದೇಶಕರಿಗೆ ಸರ್ಕಾರದ ಅಧೀನ ಕಾರ್ಯದರ್ಶಿಗಳು (ಗಣಿ, ಸಣ್ಣ ಕೈಗಾರಿಕೆಗಳು ಮತ್ತು ಜವಳಿ) ಇವರು ಬರೆದ ಅರೆ-ಸರ್ಕಾರಿ ಪತ್ರವಾಗಿರುವದಿನಾಂಕ: 23 ನೇ/ 0 26 ನೇ ಜುಲೈ, 2007 ರ ಪತ್ರದ ಮೂಲಕ,ದಿನಾಂಕ: 10 ನೇ ಮೇ, 2007 ರ ಪತ್ರದಲ್ಲಿ ಹೇಳಿರುವಂತೆ ಈ ನ್ಯಾಯಾಲಯದ ಆದೇಶವನ್ನು ಪಾಲಿಸಲು ಗಣಿ ಮತ್ತು ಭೂವಿಜ್ಞಾನಗಳ ನಿರ್ದೇಶಕರಿಗೆ ಕೋರಿದರು.ಗಣಿ ಮತ್ತು ಭೂವಿಜ್ಞಾನಗಳ ನಿರ್ದೇಶಕರಿಗೆ ಆದೇಶವನ್ನು ಪಾಲಿಸಿ, ಅನುಪಾಲನಾ ವರದಿಯನ್ನು ಸಲ್ಲಿಸಲು ಕೋರಲಾಯಿತು.

4. ದಿನಾಂಕ 08 ನೇ ಮೇ, 2007 ರ ಪತ್ರದ ಮೂಲಕ, ಆಯುಕ್ತರು ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಕೋರಿದ್ದು, ಅದರಲ್ಲಿ,ದಿನಾಂಕ: 27 ನೇ ಜನವರಿ, 2003 ರಂದು ಸಲ್ಲಿಸಿದ ನವೀಕರಣ ಅರ್ಜಿಯನ್ನು ಅದು ಪರಿಗಣಿಸಿದ್ದರೆ,ದಿನಾಂಕ: 8 ನೇ ಅಕ್ಟೋಬರ್, 2002 ರ ಅಧಿಸೂಚನೆಯನ್ನು ಹಿಂತೆಗೆದುಕೊಳ್ಳಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟಿತ್ತು.

5. ಅರ್ಜಿದಾರರ ಮೊಕದ್ದಮೆ ಪ್ರಕಾರ,ದಿನಾಂಕ: 11 ನೇ ಜುಲೈ, 2007 ರಂದು ಹೊರಡಿಸಿದ ಆದೇಶದ ಅನುಷ್ಠಾನಕ್ಕಾಗಿದಿನಾಂಕ: 01 ನೇ ಆಗಸ್ಟ್, 2007 ರಂದು ಅರ್ಜಿದಾರರು ಮನವಿಯನ್ನು ಸಲ್ಲಿಸಿದಾಗ,ದಿನಾಂಕ: 23 ನೇ ಜುಲೈ, 2007 ರ ಪತ್ರವ್ಯವಹಾರದ ಬಗ್ಗೆ ಅರ್ಜಿದಾರಿಗೆ ಗೊತ್ತಾಗಿದೆ.

6. 3 ನೇ ಎದುರುದಾರರು ಆಕ್ಷೇಪಣೆಗಳ ಹೇಳಿಕೆಯನ್ನು ಸಲ್ಲಿಸಿದ್ದಾರೆ.3 ನೇ ಎದುರುದಾರರ ತಾಯಿಯು ಸಲ್ಲಿಸಿದ ರಿಟ್ ಅರ್ಜಿಸಂಖ್ಯೆ: 11818/1987 ರಲ್ಲಿದಿನಾಂಕ: 20 ನೇ ಆಗಸ್ಟ್, 1987 ರಂದು ಆದೇಶವನ್ನು ಮಾಡಲಾಗಿತ್ತು ಎಂಬುದರ ಕಡೆಗೆ 3 ನೇ ಎದುರುದಾರರು ಗಮನ ಸೆಳೆದಿದ್ದಾರೆ.ದಿನಾಂಕ: 24 ನೇ ಜುಲೈ, 1984 ರ ಆದೇಶದ ಮೂಲಕ 3 ನೇ ಎದುರುದಾರರ ತಾಯಿಯು ಸಲ್ಲಿಸಿದ ನವೀಕರಣಕ್ಕಾಗಿನ ಅರ್ಜಿಯನ್ನು ತಿರಸ್ಕರಿಸಿರುವುದನ್ನು ಪ್ರಶ್ನಿಸಲು ಸದರಿ ರಿಟ್ ಅರ್ಜಿಯನ್ನು ಸಲ್ಲಿಸಲಾಗಿತ್ತು.ಈ ನ್ಯಾಯಾಲಯವು, ಸದರಿ ಆದೇಶದಲ್ಲಿ, ಯಾರೇ ಇತರ ವ್ಯಕ್ತಿಯ ಪರವಾಗಿ ಗಣಿಗಾರಿಕೆ ಗುತ್ತಿಗೆಯನ್ನು ಮಂಜೂರು ಮಾಡಿದ್ದರೆ, 3 ನೇ ಎದುರುದಾರರ ತಾಯಿಯು ಅಂಥ ವ್ಯಕ್ತಿಗೆ ಗುತ್ತಿಗೆ ಮಂಜೂರು ಮಾಡಿರುವುದನ್ನು ಪ್ರಶ್ನಿಸಲು ಈ ನ್ಯಾಯಾಲಯವನ್ನು ಸಂಪರ್ಕಿಸಲು ಸ್ವತಂತ್ರರಾಗಿರುತ್ತಿದ್ದರು ಎಂದು ಅಭಿಪ್ರಾಯಪಟ್ಟಿದೆ.ದಿನಾಂಕ: 29 ನೇ ಜುಲೈ, 1999 ರಂದು ಸಲ್ಲಿಸಿದ ಗುತ್ತಿಗೆ ನವೀಕರಣಕ್ಕಾಗಿನ ಅರ್ಜಿಯನ್ನು ತಿರಸ್ಕರಿಸಲಾಗಿದ್ದದಿನಾಂಕ: 03 ನೇ ಜನವರಿ, 2000 ರ ಆದೇಶವನ್ನು ರದ್ದುಪಡಿಸಲು ಕೋರುವುದಕ್ಕಾಗಿ 3 ನೇ ಎದುರುದಾರರ ತಾಯಿಯು ರಿಟ್ ರಿಟ್ ಅರ್ಜಿಸಂಖ್ಯೆ: 22230/2000 ನ್ನು ಸಲ್ಲಿಸಿದ್ದರೆಂಬ ಕಡೆ ನ್ಯಾಯಾಲಯವು ಗಮನ ಸೆಳೆದಿದೆ.3 ನೇ ಎದುರುದಾರರು ಸಲ್ಲಿಸಿದ ಆಕ್ಷೇಪಣೆಗಳಲ್ಲಿ, ನವೀಕರಣಕ್ಕಾಗಿನ ಅರ್ಜಿಯು ಪರಿಗಣನೆಗಾಗಿ ಇತ್ಯರ್ಥದಲ್ಲಿದ್ದು, ತದನುಸಾರ 27 ನೇ ಅಕ್ಟೋಬರ್, 2004 ರಂದು, 08 ನೇ ಮೇ, 2006 ರಂದು ಮತ್ತು 26 ನೇ ಅಕ್ಟೋಬರ್ 2007 ರಂದು ಕಾವ್ಯನಿರ್ವಹಣಾ ಅನುಮತಿಗಳನ್ನು 3 ನೇ ಎದುರುದಾರರಿಗೆ ಮಂಜೂರು ಮಾಡಲಾಗಿತ್ತು ಎಂಬುದರ ಕಡೆ ಗಮನ ಸೆಳೆಯಲಾಗಿದೆ.ರಿಟ್ ಅರ್ಜಿಸಂಖ್ಯೆ: 3557/2003 ರಲ್ಲಿದಿನಾಂಕ: 23 ನೇ ಜುಲೈ, 2004 ರಂದು ಹೊರಡಿಸಿದ ಆದೇಶವನ್ನು ನಾಲ್ಕು ತಿಂಗಳುಗಳ ಅವಧಿಯ ಒಳಗಾಗಿ ಪಾಲಿಸಲು ನಿರ್ದೇಶಿಸಿ ಮಾಡಲಾಗಿದ್ದ ಆದೇಶವಿರುವ 3 ನೇ ಎದುರುದಾರರು ಸಲ್ಲಿಸಿದ ರಿಟ್ ಅರ್ಜಿಸಂಖ್ಯೆ: 11122/2005 ರಲ್ಲಿ ಹೊರಡಿಸಿದದಿನಾಂಕ: 03 ನೇ ಫೆಬ್ರುವರಿ, 2006 ರ ಆದೇಶವನ್ನು ಅವಲಂಬಿಸಲಾಗಿದೆ.3 ನೇ ಎದುರುದಾರರ ತಾಯಿಯುದಿನಾಂಕ: 08 ನೇ ಸೆಪ್ಟೆಂಬರ್, 2004 ರಂದು ಮರಣ ಹೊಂದಿದ್ದಾರೆ.ಆ ತರುವಾಯದಿನಾಂಕ: 3 ನೇ ಎದುರುದಾರರು ತನ್ನ ತಾಯಿಯ ಕಾನೂನುಸಮ್ಮತ ಉತ್ತರಾಧಿಕಾರಿಯಾಗಿ ತನ್ನನ್ನು ಸೇರಿಸಲು 1 ನೇ ಮತ್ತು 2 ನೇ ಎದುರುದಾರರನ್ನು ಕೋರಿದಿನಾಂಕ: 01 ನೇ ಅಕ್ಟೋಬರ್, 2004 ರಂದು ಮನವಿಯನ್ನು ಸಲ್ಲಿಸಿದ್ದಾರೆ.ಸದರಿ ಅರ್ಜಿಯನ್ನು ಪರಿಗಣಿಸದೇ ಇದ್ದದ್ದರಿಂದ, 3 ನೇ ಎದುರುದಾರರು ರಿಟ್ ಅರ್ಜಿಸಂಖ್ಯೆ: 18631/2006 ನ್ನು ಸಲ್ಲಿಸಿದ್ದು, ಅದರಲ್ಲಿದಿನಾಂಕ: 8 ನೇ ಜನವರಿ, 2007 ರ ಆದೇಶದ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆದಿನಾಂಕ: 01 ನೇ ಅಕ್ಟೋಬರ್, 2004 ರ ಅರ್ಜಿಯನ್ನು ಪರಿಗಣಿಸಲು ನಿರ್ದೇಶಿಸಲಾಗಿದೆ.

7.ದಿನಾಂಕ: 06 ನೇ ಸೆಪ್ಟೆಂಬರ್, 2007 ರಂದು, ಗಣಿ ಮತ್ತು ಭೂವಿಜ್ಞಾನಗಳ ನಿರ್ದೇಶಕರು, ಗಣಿ ಗುತ್ತಿಗೆ ನವೀಕರಣವನ್ನು 3 ನೇ ಎದುರುದಾರರ ಹೆಸರಿಗೆ ಮಂಜೂರು ಮಾಡಲು ಕಾರ್ಯದರ್ಶಿಗಳು, ಭಾರತ ಸರ್ಕಾರ ಇವರಿಗೆ ಶಿಫಾರಸು ಮಾಡಿದ್ದರೆಂಬುದರ ಕಡೆ 3 ನೇ ಎದುರುದಾರರು ಗಮನ ಸೆಳೆದಿದ್ದಾರೆ.ಆಕ್ಷೇಪಣೆಗಳ ಹೇಳಿಕೆಯಲ್ಲಿ, 3 ನೇ ಎದುರುದಾರರಿಗೆ ನೀಡಲಾಗಿದ್ದ ವಿವಿಧ ಅನುಮತಿಗಳನ್ನು ಅವಲಂಬಿಸಲಾಗಿದೆ.ದಿನಾಂಕ: 25 ನೇ ಸೆಪ್ಟೆಂಬರ್, 2007 ರ ಅಧಿಸೂಚನೆಯ ಮೂಲಕ ಗಣಿಗಾರಿಕೆ ಗುತ್ತಿಗೆಯನ್ನುದಿನಾಂಕ: 30 ನೇ ಡಿಸೆಂಬರ್, 1983 ರಿಂದ ಜಾರಿಗೆ ಬರುವಂತೆ 20 ವರ್ಷಗಳಿಗಾಗಿ ನವೀಕರಿಸಲಾಗಿತ್ತು ಮತ್ತುದಿನಾಂಕ: 25 ನೇ ಸೆಪ್ಟೆಂಬರ್, 2007 ರ ಮತ್ತೊಂದು ಅಧಿಸೂಚನೆಯ ಮೂಲಕ ಗಣಿಗಾರಿಕೆ ಗುತ್ತಿಗೆಯನ್ನು 30 ನೇ ಡಿಸೆಂಬರ್, 2003 ರಿಂದ ಜಾರಿಗೆ ಬರುವಂತೆ ಮತ್ತೆ 20 ವರ್ಷಗಳ ಅವಧಿಗೆ ನವೀಕರಿಸಲಾಗಿತ್ತು ಎಂಬುದರ ಕಡೆ ಗಮನ ಸೆಳೆಯಲಾಗಿದೆ.ಗುತ್ತಿಗೆ ನವೀಕರಣದ ಹಿನ್ನೆಲೆಯಲ್ಲಿ,ದಿನಾಂಕ: 8

ನೇ ಅಕ್ಟೋಬರ್, 2002 ರ ಅಧಿಸೂಚನೆಯು ಅದಕ್ಕೂ ಮುಂದಿನ ಅವಧಿಗೆ ಸಿಂಧುವಾಗಿರಲಿಲ್ಲವೆಂದು 3 ನೇ ಎದುರುದಾರರು ನಿವೇದಿಸಿಕೊಂಡಿದ್ದಾರೆ ನಿವೇದಿಸಿಕೊಂಡಿದ್ದಾರೆ..ಈ ನ್ಯಾಯಾಲಯವು ಸಮರ್ಥನೀಯವಲ್ಲವೆಂದು ಹೊರಡಿಸಿದದಿನಾಂಕ: 23 ನೇ ಜುಲೈ, 2004 ರ ಆದೇಶವನ್ನು ಪ್ರಶ್ನಿಸಲು ಅರ್ಜಿದಾರರು ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿದ್ದರೆಂದು ನಿವೇದಿಸಿಕೊಳ್ಳಲಾಗಿದೆ.ಆದುದರಿಂದ, ಯಾವುದೇ ಪರಿಹಾರವನ್ನು ಅರ್ಜಿದಾರರಿಗೆ ನೀಡಲಾಗುವುದಿಲ್ಲವೆಂದು ನಿವೇದಿಸಿಕೊಳ್ಳಲಾಗಿದೆ.

8. ರಾಜ್ಯ ಸರ್ಕಾರವು ( 1 ನೇ ಮತ್ತು 2 ನೇ ಎದುರುದಾರರು) ಸಹ ಆಕ್ಷೇಪಣೆಗಳ ಹೇಳಿಕೆಗಳನ್ನು ಸಲ್ಲಿಸಿದ್ದು, ಅದರಲ್ಲಿ ಈ ನ್ಯಾಯಾಲಯವು ಹೊರಡಿಸಿದ ಆದೇಶಗಳ ಅನುಸರಣೆಯಲ್ಲಿ, 30 ನೇ ಡಿಸೆಂಬರ್, 1983 ರಿಂದ ಜಾರಿಗೆ ಬರುವಂತೆ 20 ವರ್ಷಗಳ ಅವಧಿಗಾಗಿ ಹೊನ್ನೆಬಾಗಿ ಗ್ರಾಮದ ಸರ್ವೆಸಂಖ್ಯೆ: 130 ರಲ್ಲಿರುವ ಜಮೀನಿನ ಪೈಕಿ ಸುಮಾರು 26 ಎಕರೆಗಳ ಪ್ರದೇಶದ ಮೇಲೆ ಹೊಸ ಗುತ್ತಿಗೆ ಪತ್ರವನ್ನು ಬರೆದುಕೊಡಲಾಗಿದೆ ಹಾಗೂ 20 ವರ್ಷಗಳ ಮತ್ತೊಂದು ಅವಧಿಗಾಗಿ 30.12.2003 ರಿಂದ ಜಾರಿಗೆ ಬರುವಂತೆ ತರುವಾಯದ ನವೀಕರಣವನ್ನು ಮಾಡಲಾಗಿದೆ ಎಂದು ವಾದಿಸಲಾಗಿದೆ.ಅರಣ್ಯ (ಸಂರಕ್ಷಣೆ) ಅಧಿನಿಯಮ, 1980 ರ (ಸಂಕ್ಷಿಪ್ತವಾಗಿ " ಅರಣ್ಯ ಅಧಿನಿಯಮ ') 2 ನೇ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಿದಂತೆ 3 ನೇ ಎದುರುದಾರರು ಕಡ್ಡಾಯ ಮತ್ತು ಶಾಸನಬದ್ಧ ಅರಣ್ಯ ತೀರುವಳಿ ಪ್ರಮಾಣಪತ್ರವನ್ನು ಭಾರತ ಸರ್ಕಾರದಿಂದ ಪಡೆದು ಸಲ್ಲಿಸಿರುವುದಿಲ್ಲವೆಂದು ನಿವೇದಿಸಿಕೊಳ್ಳಲಾಗಿದೆ.

9. ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, ಗುತ್ತಿಗೆ ನವೀಕರಣಕ್ಕಾಗಿ 3 ನೇ ಎದುರುದಾರರ ತಾಯಿಯು ಸಲ್ಲಿಸಿದ ಅರ್ಜಿಯನ್ನು ಎರಡು ಸಂದರ್ಭಗಳಲ್ಲಿ ತಿರಸ್ಕರಿಸಲಾಗಿದೆ ಮತ್ತು ಆ ತಿರಸ್ಕರಣೆ ಆದೇಶವನ್ನು ಎರಡು ಸಂದರ್ಭಗಳಲ್ಲಿ ಈ ನ್ಯಾಯಾಲಯವು ಸ್ಥಿರೀಕರಿಸಿದೆ.ಪ್ರಶ್ನಿತ ಪ್ರದೇಶವು ಖನಿಜಗಳ ವಿನಾಯಿತಿ ನಿಯಮಗಳು, 1960 ರ 59 ನೇ ನಿಯಮದ ಮೇರೆಗೆ ಮರು-ಮಂಜೂರಾತಿಗೆ ಲಭ್ಯವಿದೆ ಎಂದು ತೋರಿಸಲಾಗಿದೆ.ವಾಸ್ತವವಾಗಿ, 3 ನೇ ಎದುರುದಾರರು ಸದರಿ ಅಧಿಸೂಚನೆಯ ಪ್ರಕಾರ ಹೊಸ ಗುತ್ತಿಗೆಗೆ ಅರ್ಜಿ ಸಲ್ಲಿಸಿದ್ದರಾದ್ದರಿಂದ, ಈ ನ್ಯಾಯಾಲಯವು ನವೀಕರಣಕ್ಕಾಗಿ ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಲು ಪ್ರಾಧಿಕಾರಗಳಿಗೆ ನಿರ್ದೇಶಿಸಲಾಗುತ್ತಿರಲಿಲ್ಲ.3 ನೇ ಎದುರುದಾರರು ನವೀಕರಣಕ್ಕಾಗಿ ಸಲ್ಲಿಸಿದ್ದ ಮೂರನೇ ಅರ್ಜಿಯನ್ನು 03 ನೇ ಜನವರಿ, 2000 ದಂದು ರಾಜ್ಯ ಸರ್ಕಾರವು ತಿರಸ್ಕರಿಸಿತ್ತು ಹಾಗೂ ತಿರಸ್ಕರಣೆ ಆದೇಶಗಳನ್ನು ಪ್ರಶ್ನಿಸಲು 3 ನೇ ಎದುರುದಾರರು ಸಲ್ಲಿಸಿದ್ದ ಮೊದಲಿನ ರಿಟ್ ಅರ್ಜಿಯನ್ನು ತಿರಸ್ಕರಿಸಿದ ಸಂಗತಿಯನ್ನು ಅವರು ಮುಚ್ಚಿಟ್ಟಿದ್ದರೆಂಬುದನ್ನು ಮಾನ್ಯ ನ್ಯಾಯವಾದಿಗಳು ತೋರಿಸಿಕೊಟ್ಟಿದ್ದಾರೆ.ಮೊದಲಿನ ಆದೇಶದ ಸಂಗತಿಯನ್ನು ಮುಚ್ಚಿಡುವ ಮೂಲಕ 2003 ರ ರಿಟ್ ಅರ್ಜಿಸಂಖ್ಯೆ: 3557 ರಲ್ಲಿ, 23 ನೇ ಜುಲೈ, 2007 ರ ಆದೇಶವನ್ನು ಉಲ್ಲಂಘಿಸಿದ್ದಾರೆಂದು ನಿವೇದಿಸಿಕೊಳ್ಳಲಾಗಿದೆ.3 ನೇ ಎದುರುದಾರರು ತೆಗೆದುಕೊಂಡ ಗುತ್ತಿಗೆ ನವೀಕರಣದ ಕ್ರಮವು ಅಧಿಕಾರ ವ್ಯಾಪ್ತಿ ಹೊಂದಿರದ ಕ್ರಮವಾಗಿದೆ ಎಂದು ನಿವೇದಿಸಿಕೊಳ್ಳಲಾಗಿದೆ.ಕಾಮನ್ ಕಾಸ್ -ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು ' ಮೊಕದ್ದಮೆಯಲ್ಲಿ, ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಮಾನ್ಯ ನ್ಯಾಯವಾದಿಗಳು ಅವಲಂಬಿಸಿದ್ದಾರೆ.

10. ಎದುರುದಾರರ ತಾಯಿಯು ಸಲ್ಲಿಸಿದ ರಿಟ್ ಅರ್ಜಿಸಂಖ್ಯೆ: 3557/2003 ರಲ್ಲಿ ಹೊರಡಿಸಿದ 23 ನೇ ಜುಲೈ, 2004 ರ ಆದೇಶವು ಅಂತಿಮತೆಯನ್ನು ತಲುಪಿದೆ ಎಂದು 3 ನೇ ಎದುರುದಾರರ ಪರ ಹಾಜರಾದ ಮಾನ್ಯ

ಹಿರಿಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.3 ನೇ ಎದುರುದಾರರ ಹೆಸರಿಗೆ ಗುತ್ತಿಗೆಯನ್ನು ನವೀಕರಿಸಿದ ನಂತರ, ಅರ್ಜಿದಾರರು ಅದನ್ನು ಪ್ರಶ್ನಿಸಿ ಅಹವಾಲು ಹೇಳಿಕೊಳ್ಳುವ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ,ದಿನಾಂಕ: 8 ನೇ ಅಕ್ಟೋಬರ್, ಮೆ: 2002 ರ ಅಧಿಸೂಚನೆಗೆ ಸ ಂ ಬ ಂ ಧ ಪಡುವಷ್ಟರ ಮಟ್ಟಿಗೆ, ಅದನ್ನು ಅನುಷ್ಠಾನಗೊಳಿಸಲಾಗುವುದಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ.ಈಗ ಗಣಿಗಾರಿಕೆ ಗುತ್ತಿಗೆಯು 20 ವರ್ಷಗಳ ಅವಧಿಗೆ ಅಸ್ತಿತ್ವದಲ್ಲಿದ್ದು, ಸದರಿ ಗಣಿಗಾರಿಕೆ ಗುತ್ತಿಗೆಯು ಅಸ್ತಿತ್ವದಲ್ಲಿರುವಾಗ, ಅದಕ್ಕೆ ಅಡಚಣೆ ಒಡ್ಡಲಾಗುವುದಿಲ್ಲವೆಂದು ನಿವೇದಿಸಿಕೊಳ್ಳಲಾಗಿತ್ತು.ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಫೀಡರ್ ಅವರು ಗುತ್ತಿಗೆ ನವೀಕರಣದ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ.ತಿದ್ದುಪಡಿ ನಿಯಮಗಳ ಕಡೆಗೆ ನಮ್ಮ ಗಮನವನ್ನು ಸೆಳೆದು, ಯಾವುದೇ ಹಸ್ತಕ್ಷೇಪದ ಅವಶ್ಯಕತೆ ಇಲ್ಲವೆಂದು ನಿವೇದಿಸಿಕೊಳ್ಳಲಾಗಿತ್ತು.

11. ಈ ನಿವೇದನೆಗಳನ್ನು ನಾವು ಎಚ್ಚರಿಕೆಯಿಂದ ಪರಿಗಣಿಸಿದ್ದೇವೆ.ಮೊದಲನೆಯದಾಗಿ, ದಾಖಲೆಯಿಂದ ಪಡೆದ ಮೊಕದ್ದಮೆಯ ವಾಸ್ತವ ಅಂಶಗಳ ಕಡೆಗೆ ಗಮನ ನೀಡುವ ಅವಶ್ಯಕತೆ ಇದೆ. 3 ನೇ ಎದುರುದಾರರ ಮೊಕದ್ದಮೆಯ ಪ್ರಕಾರ ಸಹ, 1958 ನೇ ಸಾಲಿನಲ್ಲಿ 90 ಎಕರೆಗಳ ಪ್ರದೇಶದ ಸಂಬಂಧದಲ್ಲಿ ಗಣಿಗಾರಿಕೆ ಗುತ್ತಿಗೆಯನ್ನು 3 ನೇ ಎದುರುದಾರರ ತಂದೆಗೆ 20 ವರ್ಷಗಳ ಅವಧಿಗಾಗಿ ಮಂಜೂರು ಮಾಡಲಾಗಿತ್ತು.ಸದರಿ ಗುತ್ತಿಗೆ ಅವಧಿಯು 30 ನೇ ಡಿಸೆಂಬರ್, 1978 ರಂದು ಮುಕ್ತಾಯವಾಗಿದ್ದು, ಅದನ್ನು ಪುನಃ 5 ನೇ ನವೆಂಬರ್, 1980 ರಂದು ಮುಕ್ತಾಯಗೊಂಡ ದಿನಾಂಕದಿಂದ ಮತ್ತೆ ಐದು ವರ್ಷಗಳ ಅವಧಿಗೆ ನವೀಕರಿಸಲಾಗಿತ್ತು.ಸದರಿ ಗಣಿಗಾರಿಕೆ ಗುತ್ತಿಗೆಯು 30 ನೇ ಡಿಸೆಂಬರ್, 1983 ರಂದು ಮುಕ್ತಾಯಗೊಂಡಿತ್ತು.3 ನೇ ಎದುರುದಾರರು 27 ನೇ ಡಿಸೆಂಬರ್, 1982 ರಂದು ಮತ್ತೆ 20 ವರ್ಷಗಳ ಅವಧಿಗಾಗಿ ಗುತ್ತಿಗೆ ನವೀಕರಣಕ್ಕೆ ಅರ್ಜಿ ಸಲ್ಲಿಸಿದ್ದರು.ಸದರಿ ಅರ್ಜಿಯನ್ನು 24 ನೇ ಜುಲೈ, 1984 ರಂದು ರಾಜ್ಯ ಸರ್ಕಾರವು ತಿರಸ್ಕರಿಸಿತ್ತು.ತಿರಸ್ಕರಿಸಿ ಹೊರಡಿಸಿದ ಸದರಿ ಆದೇಶವನ್ನು 24 ನೇ ಏಪ್ರಿಲ್, 1987 ರಂದು ಪುನರೀಕ್ಷಣಾ ಅರ್ಜಿಯಲ್ಲಿ ಸ್ಥಿರೀಕರಿಸಲಾಗಿತ್ತು.ಆದುದರಿಂದ, ಗುತ್ತಿಗೆ ನವೀಕರಣಕ್ಕಾಗಿ 3 ನೇ ಎದುರುದಾರರ ತಾಯಿಯು ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿದ ಆದೇಶವನ್ನು ನಿರ್ದಿಷ್ಟವಾಗಿ ಪ್ರಶ್ನಿಸಲು ರಿಟ್ ಅರ್ಜಿಸಂಖ್ಯೆ: 11818/1987 ನ್ನು ಸಲ್ಲಿಸಿದ್ದರು.ದಿನಾಂಕ: 20 ನೇ ಆಗಸ್ಟ್, 1987 ರ ಆದೇಶದ ಮೂಲಕ, ಮಾನ್ಯ ಏಕಪೀಠ ನ್ಯಾಯಾಧೀಶರು, 3 ನೇ ಎದುರುದಾರರ ತಾಯಿಯು ಸಲ್ಲಿಸಿದ ಗುತ್ತಿಗೆ ನವೀಕರಣದ ಅರ್ಜಿಯನ್ನು ತಿರಸ್ಕರಿಸಿದ ಆದೇಶದಲ್ಲಿ ಹಸ್ತಕ್ಷೇಪ ಮಾಡಿರಲಿಲ್ಲ.ಆದಾಗ್ಯೂ, ಯಾರೇ ಇತರ ವ್ಯಕ್ತಿಯ ಹೆಸರಿನಲ್ಲಿ ಗಣಿಗಾರಿಕೆ ಗುತ್ತಿಗೆಯನ್ನು ಮಂಜೂರು ಮಾಡಿದ್ದರೆ, 3 ನೇ ಎದುರುದಾರರ ತಾಯಿಯು, ಇತರ ವ್ಯಕ್ತಿಯ ಹೆಸರಿಗೆ ಗಣಿಗಾರಿಕೆ ಗುತ್ತಿಗೆ ಮಂಜೂರು ಮಾಡಿದ ಆದೇಶದ ಕಾನೂನುಸಮ್ಮತತೆಯನ್ನು ಪ್ರಶ್ನಿಸಲು ಈ ನ್ಯಾಯಾಲಯವನ್ನು ಸಂಪರ್ಕಿಸಲು ಸ್ವತಂತ್ರರಿರುವರೆಂದು ನಿರ್ಣಯಿಸಲಾಗಿತ್ತು.ಈ ಮೊದಲೇ ಗಮನಿಸಿರುವಂತೆ, ಗಣಿಗಾರಿಕೆ ಗುತ್ತಿಗೆ ನವೀಕರಣವು ತೀವ್ರವಾದ ಮಣ್ಣು ಸವೆತಕ್ಕೆಡೆ ಮಾಡಿಕೊಡಬಹುದು ಮತ್ತು ಮಣ್ಣಿನ ಸ್ಥಿತಿಗತಿಯನ್ನು ಕೆಡಿಸಬಹುದು ಎಂಬುದುದಿನಾಂಕ: 24 ನೇ ಜುಲೈ, 1984 ರ ಆದೇಶದಲ್ಲಿ ಗುತ್ತಿಗೆ ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಲು ನೀಡಿರುವ ಕಾರಣವಾಗಿತ್ತು.3 ನೇ ಎದುರುದಾರರ ತಾಯಿಯು, ಮೇಲೆ ಹೇಳಿದ ಆದೇಶದ ವಿರುದ್ಧ ಸರ್ವೋಚ್ಚ ನ್ಯಾಯಾಲಯದ ಮುಂದೆ ವಿಶೇಷ ಅನುಮತಿ ಅರ್ಜಿಯನ್ನು ಸಲ್ಲಿಸಿದ್ದರು ಮತ್ತು ನಂತರ ಅದನ್ನು ಹಿಂತೆಗೆದುಕೊಳ್ಳಲಾಗಿತ್ತು.

12. 3 ನೇ ಎದುರುದಾರರ ತಾಯಿಯು, 29 ನೇ ಜುಲೈ, 1999 ರಂದು ಗಣಿಗಾರಿಕೆ ಗುತ್ತಿಗೆ ನವೀಕರಣಕ್ಕಾಗಿ ಎರಡನೇ ಅರ್ಜಿಯನ್ನು ಸಲ್ಲಿಸಿದ್ದರು ಮತ್ತು 24 ನೇ ಜುಲೈ, 1984 ರಂದು ಈ ಮುಂಚಿನ ಅರ್ಜಿಯನ್ನು ತಿರಸ್ಕರಿಸಲಾಗಿತ್ತು ಎಂಬ ಕಾರಣದ ಮೇಲೆ, 3 ನೇ ಜನವರಿ, 2000 ದ ಆದೇಶದ ಮೂಲಕ ಸದರಿ ಅರ್ಜಿಯನ್ನು

ತಿರಸ್ಕರಿಸಲಾಗಿತ್ತು.ದಿನಾಂಕ: 3 ನೇ ಜನವರಿ, 2000 ದ ಸದರಿ ಆದೇಶದಿಂದ ಬಾಧಿತರಾಗಿ, 3 ನೇ ಎದುರುದಾರರ ತಾಯಿಯು ರಿಟ್ ಅರ್ಜಿಸಂಖ್ಯೆ: 22230/2000 ವನ್ನು ಸಲ್ಲಿಸಿದ್ದರು ಮತ್ತು ಅದನ್ನುದಿನಾಂಕ: 13 ನೇ ನವೆಂಬರ್, 2000 ದ ಆದೇಶದ ಮೂಲಕ ವಜಾಗೊಳಿಸಲಾಗಿತ್ತು.ಸದರಿ ಆದೇಶದ 3 ನೇ ಕಂಡಿಕೆಯನ್ನು ಹೀಗೆ ಓದಲಾಗಿದೆ:

"3. ಹೊಸ ಗಣಿಗಾರಿಕೆ ಗುತ್ತಿಗೆಯನ್ನು ಅದೇ ಜಮೀನಿನ ಸಂಬಂಧದಲ್ಲಿ ನೀಡಲಾಗಿದೆಯೋ ಅಥವಾ ಇಲ್ಲವೋ ಎಂಬುದು ಯಾರಿಗೂ ಗೊತ್ತಿಲ್ಲ. ಈ ಸಂಬಂಧದಲ್ಲಿನ ವಾದಗಳು ಸ್ಪಷ್ಟವಾಗಿರುವುದಿಲ್ಲ. ಇದಲ್ಲದೆ, ಗಣಿಗಾರಿಕೆ ಗುತ್ತಿಗೆಯನ್ನು ನೀಡಲಾಗಿದ್ದರೂ ಸಹ, ಅಂಥ ಗುತ್ತಿಗೆಯನ್ನು ಯಾವ ವ್ಯಕ್ತಿಗೆ ನೀಡಲಾಗಿದೆಯೋ ಆ ವ್ಯಕ್ತಿಯನ್ನು ಪಕ್ಷಕಾರನನ್ನಾಗಿ ಮಾಡಿರುವುದಿಲ್ಲ. ಆ ವ್ಯಕ್ತಿಯನ್ನು ಪಕ್ಷಕಾರನನ್ನಾಗಿ ಮಾಡಿರುವುದಿಲ್ಲ. ಈ ಸಂದರ್ಭಗಳ ಹಿನ್ನೆಲೆಯಲ್ಲಿ, ಸಂವಿಧಾನದ 226ನೇ ಅನುಚ್ಛೇದದ ಮೇರೆಗೆ ಈ ನ್ಯಾಯಾಲಯದ ಅಧಿಕಾರವನ್ನು ಚಲಾಯಿಸಿ, ಅನುಬಂಧ–ಎಫ್ ಆದೇಶದ ಸರಿತನವನ್ನು ಪರಿಶೀಲಿಸಲಾಗುವುದಿಲ್ಲ. 'ಅನುಬಂಧ–ಎಫ್ ಆದೇಶದಲ್ಲಿರುವ ಹೇಳಿಕೆಯು 1984ರ ಆದೇಶವಾಗಿದ್ದು, ಅಚಿತಿಮವಾದುದಾಗಿದೆ ಮತ್ತು ಅದನ್ನು ಪ್ರಶ್ನಿಸಲಾಗುವುದಿಲ್ಲವೆಂಬುದನ್ನು ಅದು ಬಹಿರಂಗಪಡಿಸುತ್ತದೆ. ಈ ಬಗ್ಗೆ ಯಾವುದೇ ವಿವಾದ ಸಹ ಇಲ್ಲ. ಇಂಥ ಸಂದರ್ಭಗಳಲ್ಲಿ, ಪ್ರಸ್ತುತ ಆದೇಶವನ್ನು ಯಾವುದೇ ರೀತಿಯಲ್ಲೂ ನಿರರ್ಥಕಗೊಳಿಸಲಾಗುವುದಿಲ್ಲ. ಎಟ್ ಅರ್ಜಿಯನ್ನು ವಜಾಗೊಳಿಸುವುದು ಮಾತ್ರವೇ ಈ ನ್ಯಾಯಾಲಯಕ್ಕೆ ಸಾಧ್ಯವಿರುವ ಕ್ರಮವಾಗಿದೆ. ನಾನು ಅದನ್ನೇ ಮಾಡಿದ್ದೇನೆ."

(ಅಡಿಗೆರೆ ಹಾಕಲಾಗಿದೆ)

ರಿಟ್ ಮೇಲ್ಮನವಿಸಂಖ್ಯೆ: 354/2001 ರಲ್ಲಿ ಮೇಲಿನ ಆದೇಶವನ್ನು ಸ್ಥಿರೀಕರಿಸಲಾಗಿತ್ತು.ಹಾಗಾಗಿ, ಮೂರನೇ ಎದುರುದಾರರ ತಾಯಿಯು ಸಲ್ಲಿಸಿದ್ದ ಎರಡನೇ ನವೀಕರಣದ ಅರ್ಜಿಯನ್ನು ತಿರಸ್ಕರಿಸಿ ಹೊರಡಿಸಿದ ಆದೇಶವನ್ನು, ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿದ ಮುಂಚಿನ ಆದೇಶವು ಅಂತಿಮವೆಂಬ ಕಾರಣದ ಮೇಲೆ ಸ್ಥಿರೀಕರಿಸಲಾಗಿತ್ತು.

13.ದಿನಾಂಕ: 8 ನೇ ಅಕ್ಟೋಬರ್, 2002 ರಂದು, ಖನಿಜಗಳ ವಿನಾಯಿತಿ ನಿಯಮಗಳು, 1960 ರ 59 ನೇ ನಿಯಮದ ಮೇರೆಗೆ ಮರು-ಮಂಜೂರಾತಿಗಾಗಿ ಲಭ್ಯವಿದ್ದ ಅನುಸೂಚಿತ ಸ್ವತ್ತನ್ನು ಅಧಿಸೂಚಿಸಿ, ರಾಜ್ಯ ಸರ್ಕಾರವು ಒಂದು ಅಧಿಸೂಚನೆಯನ್ನು ಹೊರಡಿಸಿತ್ತು.ಸದರಿ ಅಧಿಸೂಚನೆಯನ್ನು ಪ್ರಕಟಿಸಿದ ನಂತರ, 3 ನೇ ಎದುರುದಾರರು 27 ನೇ ಜನವರಿ, 2003 ರಂದು ಗುತ್ತಿಗೆಯ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿದ್ದರು.3 ನೇ ಎದುರುದಾರರ ತಾಯಿಯು, 1 ನೇ ಮತ್ತು 2 ನೇ ಎದುರುದಾರರ ವಿರುದ್ಧ ಗಣಿಗಾರಿಕೆ ಗುತ್ತಿಗೆಯ ನವೀಕರಣಕ್ಕಾಗಿ ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಲು ಅವರನ್ನು ನಿರ್ಬಂಧಿಸಿ, ಆ ಕುರಿತು ಸೂಕ್ತ ಆದೇಶಗಳನ್ನು ಹೊರಡಿಸಲು ನಿರ್ದೇಶನವನ್ನು ಕೋರಿ ರಿಟ್ ಅರ್ಜಿಸಂಖ್ಯೆ: 3557/2003 ನ್ನು ಸಲ್ಲಿಸಿದ್ದರು.ದಿನಾಂಕ: 23 ನೇ ಜುಲೈ, 2004 ರ ಆದೇಶದ ಮೂಲಕ ಸದರಿ ರಿಟ್ ಅರ್ಜಿಯನ್ನು ವಿಲೇ ಮಾಡಲಾಗಿತ್ತು.ಸದರಿ ಆದೇಶದ 1 ನೇ ಕಂಡಿಕೆಯಲ್ಲಿ, 24 ನೇ ಜುಲೈ, 1984 ರಂದು ಸಲ್ಲಿಸಿದ್ದ ನವೀಕರಣದ ಅರ್ಜಿಯನ್ನು ತಿರಸ್ಕರಿಸಿದ ಬಗ್ಗೆ ಉಲ್ಲೇಖವಿದ್ದು, ರಿಟ್ ಅರ್ಜಿಸಂಖ್ಯೆ: 11818/1987 ನ್ನು ಸಲ್ಲಿಸುವ ಮೂಲಕ ಸದರಿ ಆದೇಶವನ್ನು ಪ್ರಶ್ನಿಸಲಾಗಿತ್ತೆಂಬುದು ವಾಸ್ತವ.ಆದಾಗ್ಯೂ, 29 ನೇ ಜುಲೈ, 1999 ರಂದು 3 ನೇ ಎದುರುದಾರರು ಗುತ್ತಿಗೆ ನವೀಕರಣಕ್ಕಾಗಿ ಮತ್ತೊಂದು ಅರ್ಜಿಯನ್ನು ನವೀಕರಣಕ್ಕಾಗಿ ಸಲ್ಲಿಸಿದ್ದು, ಅದನ್ನು 3 ನೇ ಜನವರಿ, 2000 ದ ಆದೇಶದ ಮೂಲಕ ತಿರಸ್ಕರಿಸಲಾಗಿತ್ತು ಎಂಬ ಸಂಗತಿಯ ಯಾವುದೇ ಉಲ್ಲೇಖವಿರಲಿಲ್ಲ.ರಿಟ್ ಅರ್ಜಿಸಂಖ್ಯೆ: 22230/2000 ವನ್ನು ಸಲ್ಲಿಸುವ ಮೂಲಕ 3 ನೇ ಎದುರುದಾರರ ತಾಯಿಯು ಸದರಿ ಆದೇಶವನ್ನು ಪ್ರಶ್ನಿಸಿದ್ದರು ಮತ್ತು ಸದರಿ ರಿಟ್ ಅರ್ಜಿಯನ್ನುದಿನಾಂಕ: 13 ನೇ ನವೆಂಬರ್,

2000 ದ ಆದೇಶದ ಮೂಲಕ ವಜಾಗೊಳಿಸಲಾಗಿತ್ತು ಎಂಬುದಕ್ಕೆ ಸಹ ಯಾವುದೇ ಉಲ್ಲೇಖವಿರಲಿಲ್ಲ.ರಿಟ್ ಅರ್ಜಿಸಂಖ್ಯೆ: 3557/2003 ರಲ್ಲಿ ಹೊರಡಿಸಿದದಿನಾಂಕ: 23 ನೇ ಜುಲೈ, 2004 ರ ತೀರ್ಪು ಮತ್ತು ಆದೇಶದ 6 ನೇ ಕಂಡಿಕೆಯಲ್ಲಿ,ದಿನಾಂಕ: 8 ನೇ ಅಕ್ಟೋಬರ್, 2002 ರ ಅಧಿಸೂಚನೆಯ ಹಿನ್ನೆಲೆಯಲ್ಲಿ, ಸಂದರ್ಭ ಬದಲಾಗಿದೆ ಎಂದು ಅಭಿಪ್ರಾಯಪಡಲಾಗಿತ್ತು.ಗಣಿಗಾರಿಕೆ ಗುತ್ತಿಗೆಯ ನವೀಕರಣಕ್ಕಾಗಿ 3 ನೇ ಎದುರುದಾರರ ತಾಯಿಯು ಸಲ್ಲಿಸಿದ 27 ನೇ ಜನವರಿ, 2003 ರ ಅರ್ಜಿಯನ್ನು ಪರಿಗಣಿಸುವಂತೆ 1 ನೇ ಮತ್ತು 2 ನೇ ಎದುರುದಾರರಿಗೆ ಪರಮಾದೇಶದ (ಮ್ಯಾಂಡಮಸ್) ರಿಟ್‌ಅನ್ನು ನೀಡಲು ರಿಟ್ ಅರ್ಜಿಯಲ್ಲಿ ಮನವಿ ಮಾಡಿಕೊಳ್ಳಲಾಗಿತ್ತು.ಹಾಗಾಗಿ, ಮೊದಲಿನ ಎರಡು ಅರ್ಜಿಗಳನ್ನು ತಿರಸ್ಕರಿಸಿದ ನಂತರ ಗುತ್ತಿಗೆ ನವೀಕರಣಕ್ಕಾಗಿ 3 ನೇ ಅರ್ಜಿಯನ್ನು ಸಲ್ಲಿಸಲಾಗಿತ್ತು.ಈ ಮೊದಲೇ ಹೇಳಿರುವಂತೆ, 3 ನೇ ಎದುರುದಾರರ ತಂದೆಯ ಹೆಸರಿಗೆ ನೀಡಲಾಗಿದ್ದ ಗುತ್ತಿಗೆಯು 30 ನೇ ಡಿಸೆಂಬರ್, 1983 ರಷ್ಟು ಹಿಂದೆಯೇ ಕೊನೆಗೊಂಡಿತ್ತು.ಕೊನೆಯದಾಗಿ, 23 ನೇ ಜುಲೈ, 2004 ರ ತೀರ್ಪು ಮತ್ತು ಆದೇಶದಲ್ಲಿ, ಈ ಮುಂದಿನ ನಿರ್ದೇಶನವನ್ನು ನೀಡಲಾಗಿತ್ತು:

"9. ವಿಷಯಕ್ಕೆ ಸಂಬಂಧಿಸಿದ ಈ ಅಭಿಪ್ರಾಯದ ಹಿನ್ನೆಲೆಯಲ್ಲಿ, ರಿಟ್ ಅರ್ಜಿಗೆ ಅನುಮತಿ ನೀಡಲಾಗಿದೆ. ಈ ಕೂಡಲೇ, ಅಧಿಸೂಚನೆಯ ಅನುಸರಣೆಯಲ್ಲಿ ಸ್ವೀಕರಿಸಿದ ಇತರ ಅರ್ಜಿಗಳ ಆಧಾರದ ಮೇಲೆ ಯಾವುದೇ ಇತರ ಅರ್ಜಿದಾರನಿಗೆ ಜಮೀನನ್ನು ಮಂಜೂರು ಮಾಡುವ ಮೊದಲು ಯಾವುದೇ ಸಂದರ್ಭದಲ್ಲಿ ಅನುಬಂಧ- 'ಡಿ'ಯಲ್ಲಿದ್ದಂತೆ ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗಾಗಿ ಸಲ್ಲಿಸಿದ ದಿನಾಂಕ : 27.01.2003 ರ ಅರ್ಜಿಯನ್ನು ಪರಿಗಣಿಸಲು ಹಾಗೂ ಅನುಬಂಧ - ' ಇ'ಯಲ್ಲಿರುವಂತೆ ಹೊನ್ನೆಬಾಗಿ ಗ್ರಾಮದ ಸರ್ವೆ ಸಂಖ್ಯೆ : 130 ರ ಮತ್ತು ಯರೆಕಟ್ಟೆ ಗ್ರಾಮದ ಸರ್ವೆ ಸಂಖ್ಯೆ 28 ರ ( ಭಾಗ ) ಸಂಬಂಧದಲ್ಲಿನ ಗುತ್ತಿಗೆ ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಲು ಹಾಗೂ ಕಾನೂನಿಗೆ ಅನುಗುಣವಾಗಿ ಆ ಕುರಿತು ಆದೇಶಗಳನ್ನು ಹೊರಡಿಸಲು ಎದುರುದಾರರಿಗೆ ನಿರ್ದೇಶಿಸಲಾಗಿದೆ . "

(ಅಡಿಗೆರೆ ಹಾಕಲಾಗಿದೆ)

ಹಾಗಾಗಿ, ಗುತ್ತಿಗೆ ನವೀಕರಣದ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿರುವಂತೆ,ದಿನಾಂಕ: 27 ನೇ ಜನವರಿ, 2003 ರ ಅರ್ಜಿಯನ್ನು ಪರಿಗಣಿಸಲು ನಿರ್ದೇಶನವನ್ನು ನೀಡಲಾಗಿತ್ತು.ಸದರಿ ಅರ್ಜಿಯನ್ನು ಕಾನೂನಿಗನುಗುಣವಾಗಿ ವಿಲೇ ಮಾಡಬೇಕೆಂದು ಆದೇಶಿಸಲಾಗಿತ್ತು.

14. ಸದರಿ ಆದೇಶದ ಮೂಲಕ, ಗುತ್ತಿಗೆ ನವೀಕರಣಕ್ಕಾಗಿ ಸಲ್ಲಿಸಲಾಗಿದ್ದ ಎರಡು ಅರ್ಜಿಗಳನ್ನು ಕುರಿತು ಹೊರಡಿಸಿದ ಮುಂಚಿನ ಎರಡು ತಿರಸ್ಕರಣೆ ಆದೇಶಗಳನ್ನು ಈ ನ್ಯಾಯಾಲಯವು ಬದಲಾಯಿಸಿರುವುದಿಲ್ಲ/ಪಲ್ಲಟಗೊಳಿಸಿರುವುದಿಲ್ಲ ಹಾಗೂ 27 ನೇ ಜನವರಿ, 2003 ರಂದು 3 ನೇ ಎದುರುದಾರರು ಸಲ್ಲಿಸಿದ ಅರ್ಜಿಯನ್ನು ಗುತ್ತಿಗೆ ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿ ಎಂಬಂತೆ ಭಾವಿಸಿ, ಅದನ್ನು ಕಾನೂನಿಗನುಗುಣವಾಗಿ ಪರಿಗಣಿಸಲು ಮಾತ್ರವೇ ನಿರ್ದೇಶನ ನೀಡಲಾಗಿತ್ತು.ಹಾಗಾಗಿ, ಮೂರನೇ ಎದುರುದಾರರ ತಾಯಿಯು ಗುತ್ತಿಗೆ ನವೀಕರಣಕ್ಕಾಗಿ ಸಲ್ಲಿಸಿದ ಮೊದಲಿನ ಎರಡು ಅರ್ಜಿಗಳನ್ನು ತಿರಸ್ಕರಿಸಿ ಹೊರಡಿಸಿದ್ದ ಆದೇಶವು ಅಂತಿಮವಾದುದಾಗಿದೆ.

15. ಈ ಹಂತದಲ್ಲಿ, ಗಣಿಗಾರಿಕೆ ಗುತ್ತಿಗೆಯ ನವೀಕರಣವನ್ನು ನಿಯಂತ್ರಿಸುವ ಸದರಿ ನಿಯಮಗಳ 24- ಎ ನಿಯಮದ ಉಪಬಂಧಗಳನ್ನು ಉಲ್ಲೇಖಿಸುವುದು ಅಗತ್ಯವಾಗಿದೆ.24 ಎ ನಿಯಮವು 10 ನೇ ಫೆಬ್ರುವರಿ, 1987

ರಿಂದ ನಿಯಮ ಪುಸ್ತಕದಲ್ಲಿ ಅಸ್ತಿತ್ವದಲ್ಲಿದೆ.24- ಎ ನಿಯಮದ ( 1) ನೇ ಉಪ-ನಿಯಮದ ಪ್ರಕಾರ, ಗಣಿಗಾರಿಕೆ ಗುತ್ತಿಗೆಯ ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿಯನ್ನು, ಗುತ್ತಿಗೆ ಅವಧಿ ಬಾಕಿ ಇರುವ ದಿನಾಂಕಕ್ಕೆ ಮುಂಚೆ ಕನಿಷ್ಠಪಕ್ಷ ಹನ್ನೆರಡು ತಿಂಗಳುಗಳ ಮೊದಲು ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕಾಗುತ್ತದೆ.ಪ್ರಸ್ತುತ ಮೊಕದ್ದಮೆಯಲ್ಲಿ, ಸದರಿ ಅರ್ಜಿಯನ್ನು 27 ನೇ ಜನವರಿ, 2003 ರಂದು, ಗುತ್ತಿಗೆ ಅವಧಿ ಕೊನೆಗೊಂಡ ಹಲವಾರು ವರ್ಷಗಳ ನಂತರ ಸಲ್ಲಿಸಲಾಗಿತ್ತು.ಆದುದರಿಂದ, ಸದರಿ ನಿಯಮಗಳ 24- ಎ ನಿಯಮದ ( 1) ನೇ ಉಪ-ನಿಯಮದಲ್ಲಿ ನಿಗದಿಪಡಿಸಿದ ಸಮಯದೊಳಗೆ ಸದರಿ ಅರ್ಜಿಯನ್ನು ಸಲ್ಲಿಸಿರಲಿಲ್ಲ.ಆದುದರಿಂದ, 27 ನೇ ಜನವರಿ, 2003 ರಂದು 3 ನೇ ಎದುರುದಾರರ ತಾಯಿಯು ಸಲ್ಲಿಸಿದ ಗುತ್ತಿಗೆ ನವೀಕರಣದ ಅರ್ಜಿಯನ್ನು ಪುರಸ್ಕರಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.ಕಾರಣ, ಮೊದಲನೆಯದಾಗಿ, ಅದನ್ನು 24 ಎ ನಿಯಮದ ( 1) ನೇ ಉಪ-ನಿಯಮದ ಮೇರೆಗೆ ನಿರ್ದಿಷ್ಟ ಪಡಿಸಿದ ಸಮಯದೊಳಗೆ ಸಲ್ಲಿಸಿರಲಿಲ್ಲ ಮತ್ತು ಎರಡನೆಯದಾಗಿ, ಎರಡು ಸಂದರ್ಭಗಳಲ್ಲಿ 3 ನೇ ಎದುರುದಾರರು ಸಲ್ಲಿಸಿದ ಮೊದಲಿನ ಅರ್ಜಿಗಳನ್ನು ತಿರಸ್ಕರಿಸಲಾಗಿತ್ತು ಮತ್ತು ಹಾಗೆ ತಿರಸ್ಕರಿಸಿ ಹೊರಡಿಸಿದ ಆದೇಶಗಳು ಅಂತಿಮವಾಗಿದ್ದವು.

16. 1 ನೇ ಮತ್ತು 2 ನೇ ಎದುರುದಾರರಿಗೆ ಕಾನೂನಿಗನುಗುಣವಾಗಿದಿನಾಂಕ: 27 ನೇ ಜನವರಿ, 2003 ರ ಅರ್ಜಿಯನ್ನು ಪರಿಗಣಿಸಲು ನಿರ್ದೇಶಿಸಲಾಗಿತ್ತು.ಕರ್ನಾಟಕ ಸರ್ಕಾರವು ಸದರಿ ನಿರ್ದೇಶನವು ಗುತ್ತಿಗೆ ನವೀಕರಣಕ್ಕೆ ಕಡ್ಡಾಯ ನಿರ್ದೇಶನವೆಂಬಂತೆ ತಪ್ಪಾಗಿ ಪರಿಗಣಿಸಿದೆ ಎಂದು ಕಂಡುಬರುತ್ತದೆ.ರಾಜ್ಯ ಸರ್ಕಾರವು ಸಲ್ಲಿಸಿದ ಆಕ್ಷೇಪಣೆಗಳಲ್ಲಿನ 8 ನೇ ಕಂಡಿಕೆಯಲ್ಲಿ, ಈ ನ್ಯಾಯಾಲಯವು ಹೊರಡಿಸಿದ ಆದೇಶಕ್ಕನುಸಾರವಾಗಿ, ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿನ ಹೊನ್ನೇಬಾಗಿ ಗ್ರಾಮದ ಸರ್ವೆಸಂಖ್ಯೆ: 130 ರಲ್ಲಿನ 26 ಎಕರೆಗಳ ಪ್ರದೇಶಕ್ಕೆ 20 ವರ್ಷಗಳ ಅವಧಿಗಾಗಿ ಹೊಸ ಗುತ್ತಿಗೆಯನ್ನು ಕಾರಗತಗೊಳಿಸಲಾಗಿತ್ತು ಎಂದು ವಾದಿಸಲಾಗಿದೆ.ಮೂಲತಃ ಮಂಜೂರು ಮಾಡಲಾಗಿದ್ದ ಗುತ್ತಿಗೆಯ ಸಂಬಂಧದಲ್ಲಿನ ಭೂಪ್ರದೇಶವು ಸುಮಾರು 90 ಎಕರೆಗಳಾಗಿತ್ತು.30 ನೇ ಡಿಸೆಂಬರ್, 1983 ರಿಂದ ಜಾರಿಗೆ ಬರುವಂತೆ 20 ವರ್ಷಗಳ ಅವಧಿಗಾಗಿ 25 ನೇ ಸೆಪ್ಟೆಂಬರ್, 2007 ರಂದು ಮತ್ತು 30 ನೇ ಡಿಸೆಂಬರ್, 2003 ರಿಂದ ಜಾರಿಗೆ ಬರುವಂತೆ ಮತ್ತೆ 20 ವರ್ಷಗಳ ಅವಧಿಗಾಗಿ D ನವೀಕರಣವನ್ನು ಮಾಡಲಾಗಿತ್ತು.

17. ತಿದ್ದುಪಡಿಯಾದ ರಿಟ್ ಅರ್ಜಿಯ ಪ್ರಕಾರ, ರಿಟ್ ಅರ್ಜಿಯಲ್ಲಿನ ಮೊದಲನೇ ಮನವಿಯು, ರಿಟ್ ಅರ್ಜಿಸಂಖ್ಯೆ: 3557/2003 ರಲ್ಲಿ ಹೊರಡಿಸಿದ 23 ನೇ ಜುಲೈ, 2004 ರ ಆದೇಶವನ್ನು ತಳ್ಳಿಹಾಕುವುದನ್ನು ಕುರಿತಾಗಿತ್ತು.3 ನೇ ಎದುರುದಾರರು ಸಲ್ಲಿಸಿದ್ದ ನವೀಕರಣದ ಅರ್ಜಿಯ ಪರಿಗಣನೆಯು ಸದರಿ ಆದೇಶವು ನಿರ್ದೇಶಿಸುವಷ್ಟರಮಟ್ಟಿಗೆ ಮಾತ್ರವೇ ಸದರಿ ಮನವಿಯನ್ನು ಅವಲಂಬಿಸಬಾರದಾಗಿತ್ತು.ಇದಲ್ಲದೆ, ಕಾನೂನಿಗನುಗುಣವಾಗಿ ಪರಿಗಣನೆಯನ್ನು ಮಾಡಬೇಕಿತ್ತು.ರಿಟ್ ಅರ್ಜಿಯಲ್ಲಿ ಮಾಡಿಕೊಂಡ ಮತ್ತೊಂದು ಮನವಿಯೆಂದರೆ, 3 ನೇ ಎದುರುದಾರರ ತಾಯಿಯ ಹೆಸರಿನಲ್ಲಿ ಗುತ್ತಿಗೆಯನ್ನು ನವೀಕರಿಸಲಾಗಿದ್ದ ಮೇರೆಗೆ 25 ನೇ ಸೆಪ್ಟೆಂಬರ್, 2007 ರ ಅಧಿಸೂಚನೆಯನ್ನು ರದ್ದುಗೊಳಿಸುವುದಾಗಿತ್ತು.ಸದರಿ ಅಧಿಸೂಚನೆಯ ಮೂಲಕ, ಗುತ್ತಿಗೆಯನ್ನು 20 ವರ್ಷಗಳ ಅವಧಿಗಾಗಿ ವಿಸ್ತರಿಸಬೇಕೆಂದು/ನವೀಕರಿಸಬೇಕೆಂದು ಆದೇಶಿಸಲಾಗಿತ್ತು.ವಾಸ್ತವವಾಗಿ, ಅದೇ ದಿನಾಂಕದ ಮತ್ತೊಂದು ಅಧಿಸೂಚನೆಯ ಮೂಲಕ ಗುತ್ತಿಗೆಯನ್ನು ಎರಡನೇ ಸಂದರ್ಭದಲ್ಲಿ ನವೀಕರಿಸಬೇಕೆಂದು ಆದೇಶಿಸಲಾಗಿತ್ತು.

18. ಈ ಮೊದಲೇ ಗಮನಿಸಿರುವಂತೆ, 1 ನೇ ಮತ್ತು 2 ನೇ ಎದುರುದಾರರು ಗುತ್ತಿಗೆ ನವೀಕರಣದ ಮೊದಲಿನ ಎರಡು ಅರ್ಜಿಗಳನ್ನು ತಿರಸ್ಕರಿಸಿದ್ದರು ಮತ್ತು ಸದರಿ ಎರಡು ಆದೇಶಗಳು ಈ ನ್ಯಾಯಾಲಯದ ತೀರ್ಮಾನಕ್ಕೆ ಅಡ್ಡ ಬರಲಿಲ್ಲ ಮತ್ತು ಅಂತಿಮತೆಯನ್ನು ತಲುಪಿದ್ದವು.ದಿನಾಂಕ: 27 ನೇ ಜನವರಿ, 2003 ರ ಮೂರನೇ ಅರ್ಜಿಯನ್ನು 1960 ರ ಸದರಿ ನಿಯಮಗಳ 24- ಎ ನಿಯಮದ ( 1) ನೇ ಉಪ-ನಿಯಮದಲ್ಲಿ ಉಪಬಂಧಿಸಿದಂತೆ ನಿಗದಿತ ಸಮಯದೊಳಗೆ ಸಲ್ಲಿಸಿರಲಿಲ್ಲ.ಆದುದರಿಂದ, 27 ನೇ ಜನವರಿ, 2003 ರಂದು ಸಲ್ಲಿಸಲಾಗಿದ್ದ ಗುತ್ತಿಗೆ ನವೀಕರಣದ 3 ನೇ ಅರ್ಜಿಯು ಸಮರ್ಥನೀಯವಲ್ಲವೆ ಅಲ್ಲ ಹಾಗೂ 1 ನೇ ಮತ್ತು 2 ನೇ ಎದುರುದಾರರು ಅದನ್ನು ಪುರಸ್ಕರಿಸಬಾರದಾಗಿತ್ತು ಮತ್ತು ಪರಿಗಣಿಸಬಾರದಾಗಿತ್ತು.ಕಾನೂನು ಅಗತ್ಯಪಡಿಸಿದಂತೆ ಅವರು ಅದನ್ನು ತಿರಸ್ಕರಿಸಬೇಕಿತ್ತು.ದಿನಾಂಕ: 27 ನೇ ಜನವರಿ, 2003 ರ ಅರ್ಜಿಗೆ ಅವಕಾಶ ನೀಡಲು ಈ ನ್ಯಾಯಾಲಯವು ಯಾವುದೇ ನಿರ್ದೇಶನವನ್ನು ನೀಡಿರಲಿಲ್ಲ.ಅರ್ಜಿಯನ್ನು ಕಾನೂನಿಗನುಗುಣವಾಗಿ ನಿರ್ಧರಿಸಬೇಕಿತ್ತು.ಸದರಿ ಅರ್ಜಿಯನ್ನು ತಿರಸ್ಕರಿಸುವುದು ಕಾನೂನಿಗನುಗುಣವಾಗಿ ಮುಕ್ತವಿದ್ದ ಏಕಮಾತ್ರ ಕ್ರಮವಾಗಿತ್ತು.ಆದುದರಿಂದ, 25 ನೇ ಸೆಪ್ಟೆಂಬರ್, 2007 ರ ಅಧಿಸೂಚನೆಗಳನ್ನು ತಳ್ಳಿಹಾಕಬೇಕಾಗಿದೆ.1957 ರ ಸದರಿ ಅಧಿನಿಯಮದ 8 ಎ ಪ್ರಕರಣದ ( 3) ನೇ ಉಪ-ಪ್ರಕರಣದ (12 ನೇ ಜನವರಿ, 2015 ರಿಂದ ತಿದ್ದುಪಡಿಯಾದಂತೆ) ಪ್ರಕಾರ ಸಹ, ಮೂರು ಸಂದರ್ಭಗಳಲ್ಲಿ ನವೀಕರಿಸಲಾಗಿದ್ದ ಗುತ್ತಿಗೆ ಸಂಬಂಧದಲ್ಲಿ ಪರಿಭಾವಿಸಲಾಗುವ ಉಪಬಂಧವು ಅನ್ವಯವಾಗುವುದಿಲ್ಲ.ಪರಿಭಾವಿಸಲಾಗುವ ಉಪಬಂಧವು, 12 ನೇ ಆಗಸ್ಟ್, 2015 ಕ್ಕೆ ಮುಂಚೆ ಗುತ್ತಿಗೆಯನ್ನು ಈಗಾಗಲೇ ನವೀಕರಿಸಿರುವಾಗ ಅನ್ವಯವಾಗುವುದಿಲ್ಲ.

19. ರಾಜ್ಯ ಸರ್ಕಾರವು ನ್ಯಾಯಾಲಯ ನಿಂದನಾ ವ್ಯವಹರಣೆಗಳನ್ನು ಎದುರಿಸಬೇಕಾಗುತ್ತದೆ ಎಂಬ ಏಕಮಾತ್ರ ಕಾರಣದ ಮೇಲೆ ಅದು ನವೀಕರಣದ ಅಧಿಸೂಚನೆಯನ್ನು ಹೊರಡಿಸಿದೆ ಎಂಬುದನ್ನುದಿನಾಂಕ: 23 ನೇ/26 ನೇ ಜುಲೈ, 2007 ರ ಪ್ರಶ್ನಿತ ಪತ್ರವ್ಯವಹಾರವು ಸೂಚಿಸುತ್ತದೆ.ಅರ್ಜಿದಾರರು ಮತ್ತು 3 ನೇ ಎದುರುದಾರರಿಬ್ಬರೂ ಹೊಸ ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಯನ್ನು ಕೋರಿ ಅರ್ಜಿಗಳನ್ನು ಸಲ್ಲಿಸಿದ್ದರು ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳುವುದು ಇಲ್ಲಿ ಯುಕ್ತವಾಗಿದೆ.ದಿನಾಂಕ: 8 ನೇ ಅಕ್ಟೋಬರ್, 2002 ರ ಅಧಿಸೂಚನೆಯ ಪ್ರಕಾರ 3 ನೇ ಎದುರುದಾರರುದಿನಾಂಕ: 27 ನೇ ಜನವರಿ, 2003 ರ ಅರ್ಜಿಯನ್ನು ಸಲ್ಲಿಸಿದ್ದರು ಮತ್ತು ಅರ್ಜಿದಾರರು 3 ನೇ ಫೆಬ್ರುವರಿ, 2007 ರಂದು ಗುತ್ತಿಗೆ ಮಂಜೂರಾತಿಗೆ ಅರ್ಜಿಯನ್ನು ಸಲ್ಲಿಸಿದ್ದರು.ಗುತ್ತಿಗೆ ನವೀಕರಣದ ಪರಿಣಾಮವಾಗಿ,ದಿನಾಂಕ: 8 ನೇ ಅಕ್ಟೋಬರ್, 2002 ರ ಅಧಿಸೂಚನೆಯ ಆಧಾರದ ಮೇಲೆ ಅರ್ಜಿದಾರರ ಅರ್ಜಿಯನ್ನು ಪರಿಗಣಿಸದೇ ಇದ್ದದ್ದರಿಂದ ಅವರು ನೇರವಾಗಿ ಬಾಧಿತರಾದರು.ಈಗ ಎರಡೂ ಅರ್ಜಿಗಳನ್ನು, ಗಣಿ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957 ರ (ಸಂಕ್ಷಿಪ್ತವಾಗಿ " 1957 ರ ಸದರಿ ಅಧಿನಿಯಮ) ಉಪಬಂಧಗಳಿಗನುಸಾರವಾಗಿ ನಿರ್ಧರಿಸಬೇಕಾಗುತ್ತದೆ.ಸದರಿ ಅರ್ಜಿಗಳು 12 ನೇ ಜನವರಿ, 2015 ರಂದು ಇತ್ಯರ್ಥದಲ್ಲಿ ಇದ್ದದ್ದರಿಂದ, ಸದರಿ ಅರ್ಜಿಗಳನ್ನು 1957 ರ ಸದರಿ ಅಧಿನಿಯಮದ 10 ಎ ಪ್ರಕರಣದ ( 2) ನೇ ಉಪ-ಪ್ರಕರಣದ ಪ್ರಕಾರ ನಿರ್ಧರಿಸಬೇಕಾಗುತ್ತದೆ.ಹಾಗಾಗಿ, 12 ನೇ ಜನವರಿ, 2015 ರಿಂದ ಜಾರಿಗೆ ಬಂದಿರುವ 10 ಎ ಪ್ರಕರಣದ ಉಪಬಂಧಗಳಿಗನುಸಾರವಾಗಿ ಅರ್ಜಿಗಳನ್ನು ನಿರ್ಧರಿಸಬೇಕಾಗುತ್ತದೆ.ಸದರಿ ದಿನಾಂಕದಂದು ಬಾಕಿ ಇದ್ದ ಎಲ್ಲಾ ಅರ್ಜಿಗಳು ಅನರ್ಹವಾಗತಕ್ಕದ್ದು ಎಂದು 10 ಎ ಪ್ರಕರಣದ ( 1) ನೇ ಉಪ-ಪ್ರಕರಣದಲ್ಲಿ ವಿಧಿಸಲಾಗಿದೆ.10 ಎ ಪ್ರಕರಣದ ( 2) ನೇ ಉಪ-ಪ್ರಕರಣವು, 10 ಎ ಪ್ರಕರಣದ ( 1) ನೇ ಉಪ-ಪ್ರಕರಣಕ್ಕೆ ವಿನಾಯಿತಿಯಾಗಿದ್ದು,ದಿನಾಂಕ: 12 ನೇ ಜನವರಿ, 2015 ರಂದು ಅರ್ಜಿಗಳು ಬಾಕಿ ಇದ್ದವು ಎಂಬ ಸಂಗತಿ ಏನೇ ಇದ್ದರೂ, ಅದನ್ನು ವ್ಯವಹರಿಸಬಹುದಾಗಿದೆ; ಪರಂತು, ಅದು

10 ಎ ಪ್ರಕರಣದ ( 2) ನೇ ಉಪ-ಪ್ರಕರಣದ (ಬಿ) ಖಂಡದಲ್ಲಿ ವಿಧಿಸಲಾದ ಪರೀಕ್ಷೆಗಳನ್ನು ಈಡೇರಿಸಬೇಕು. ತದನುಸಾರವಾಗಿ, ಈ ಮುಂದಿನ ಆದೇಶವನ್ನು ಹೊರಡಿಸುವ ಮೂಲಕ ನಾವು ಈ ರಿಟ್ ಅರ್ಜಿಯನ್ನು ವಿಲೇ ಮಾಡುತ್ತೇವೆ:

1) ರಿಟ್ ಅರ್ಜಿಸಂಖ್ಯೆ: 3557/2003 ರಲ್ಲಿ ಹೊರಡಿಸಿದದಿನಾಂಕ: 23 ನೇ ಜುಲೈ, 2004 ರ ಆದೇಶದ ಪ್ರಕಾರ, 3 ನೇ ಎದುರುದಾರರ ತಾಯಿಯು ಸಲ್ಲಿಸಿದ ಅರ್ಜಿಯನ್ನು, 1983 ನೇ ಸಾಲಿನಲ್ಲಿ ಮುಕ್ತಾಯವಾದ ಗುತ್ತಿಗೆ ನವೀಕರಣದ ಅರ್ಜಿ ಎಂದು ಪರಿಗಣಿಸಿ, ಕಾನೂನಿಗನುಗುಣವಾಗಿ ಅದನ್ನು ನಿರ್ಧರಿಸಲು 1 ನೇ ಮತ್ತು 2 ನೇ ಎದುರುದಾರರು ಹೊಣೆಗಾರರಾಗಿದ್ದರು ಎಂದು ನಾವು ಅಭಿಪ್ರಾಯಪಟ್ಟು, ಹಾಗೆ ಘೋಷಿಸಿದ್ದೇವೆ.ಇದಲ್ಲದೆ,ದಿನಾಂಕ: 27 ನೇ ಜನವರಿ, 2003 ರ ಅರ್ಜಿಯ ಆಧಾರದ ಮೇಲೆ ಗುತ್ತಿಗೆ ನವೀಕರಣಕ್ಕೆ ಸಲ್ಲಿಸಿದ ರಿಟ್ ಅರ್ಜಿಸಂಖ್ಯೆ: 3557/2003 ರಲ್ಲಿ ಯಾವುದೇ ಕಡ್ಡಾಯ ನಿರ್ದೇಶನವನ್ನು ಹೊರಡಿಸಿಲ್ಲವೆ ೦ ದು ನಾವು ಅಭಿಪ್ರಾಯಪಡುತ್ತೇವೆ;

ii) ಮೂರನೇ ಎದುರುದಾರರ ತಾಯಿಯು ಸಲ್ಲಿಸಿದ್ದ ಗುತ್ತಿಗೆ ನವೀಕರಣಕ್ಕಾಗಿನದಿನಾಂಕ: 27 ನೇ ಜನವರಿ, 2003 ರ ಅರ್ಜಿಯು, ಖನಿಜಗಳ ವಿನಾಯಿತಿ ನಿಯಮಗಳು, 1960 ರ 24- ಎ ನಿಯಮದ ( 1) ನೇ ಉಪ-ನಿಯಮದ ಅಡಿಯಲ್ಲಿ ಗೊತ್ತುಪಡಿಸಿದ ಸಮಯದೊಳಗೆ ಅದನ್ನು ಸಲ್ಲಿಸದೇ ಇದ್ದಷ್ಟರಮಟ್ಟಿಗೆ, ಅದು ಕಾನೂನಿನ ಪ್ರಕಾರ ಸಮರ್ಥನೀಯವಾಗಿರಲಿಲ್ಲ ಎಂದು ನಾವು ನಿರ್ಣಯಿಸಿದ್ದೇವೆ.ಇದಲ್ಲದೆ, ನವೀಕರಣಕ್ಕಾಗಿ ಸಲ್ಲಿಸಿದ ಮೊದಲಿನ ಎರಡು ಅರ್ಜಿಗಳನ್ನು ತಿರಸ್ಕರಿಸಿ ಹೊರಡಿಸಿದ ಆದೇಶಗಳು ಅಂತಿಮವಾಗಿವೆ;

iii) ಆದುದರಿಂದ,ದಿನಾಂಕ: 25 ನೇ ಸೆಪ್ಟೆಂಬರ್, 2007 ರ ಎರಡು ಅಧಿಸೂಚನೆಗಳನ್ನು ಮತ್ತು ಅವುಗಳ ಆಧಾರದ ಮೇಲೆ ಜಾರಿಗೆ ಬಂದ ನವೀಕರಣವನ್ನು ನಾವು ತಳ್ಳಿ ಹಾಕಿದ್ದೇವೆ;

iv) ಕಾನೂನಿಗನುಗುಣವಾಗಿ ಮತ್ತು 1957 ರ ಸದರಿ ಅಧಿನಿಯಮದ 10 ಎ ಪ್ರಕರಣದ ( 2) ನೇ ಉಪ-ಪ್ರಕರಣದ ಉಪಬಂಧಗಳ ಹಿನ್ನೆಲೆಯಲ್ಲಿ ಮೂರನೇ ಎದುರುದಾರರು ಸಲ್ಲಿಸಿದ್ದದಿನಾಂಕ: 27 ನೇ ಜನವರಿ, 2003 ರ ಅರ್ಜಿಯನ್ನು ಮತ್ತು ಅರ್ಜಿದಾರರು ಸಲ್ಲಿಸಿದ್ದದಿನಾಂಕ: 3 ನೇ ಫೆಬ್ರುವರಿ, 2007 ರ ಅರ್ಜಿಯನ್ನು ಪರಿಗಣಿಸುವಂತೆ ನಾವು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸುತ್ತೇವೆ;

V) 3 ನೇ ಡಿಸೆಂಬರ್, 2019 ರಿಂದ ಎರಡು ತಿಂಗಳುಗಳ ಅವಧಿಯ ಒಳಗಾಗಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳತಕ್ಕದ್ದು;

vi) ಇಂದಿನಿಂದ ಒಂದು ತಿಂಗಳು ತಿಂಗಳು ಮುಕ್ತಾಯವಾದ ನಂತರ ನೀಡಲಾದ ನಿರ್ದೇಶನಗಳು ಕಾರಾಚರಣೆಗೆ ಬರುತ್ತವೆ;

vii) ತದನುಸಾರವಾಗಿ, ಮೇಲಿನ ನಿಬಂಧನೆಗಳ ಆಧಾರದ ಮೇಲೆ ರಿಟ್ ಅರ್ಜಿಗೆ ಅನುಮತಿ ನೀಡಲಾಗಿದೆ ಮತ್ತು ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿಲ್ಲ.